ಸನ್ನಿವೇಶದಲ್ಲಿ ಚಾಮ್‌ಸ್ಕಿಯ ಭಾಷಿಕ ಚಿಂತನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡದ್ದು ಅತ್ಯಂತ ವಿರಳ. ವೈಯಕ್ತಿಕ ನೆಲೆಯಲ್ಲಿ ಚಾಮ್‌ಸ್ಕಿಯನ್ನು ಆಳವಾಗಿ ಓದಿದವರೂ ಬೆರಳೆಣಿಕೆ ವಿದ್ವಾಂಸರು ಮಾತ್ರ. ಒಂದು ಸಂಗತಿ ಮಾತ್ರ ದಿಟ. ಈತನ ಭಾಷಿಕ ಚಿಂತನೆಗಳಕ್ಕಿಂತ ಹೆಚ್ಚಾಗಿ ರಾಜಕೀಯ ಚಿಂತನೆಗಳನ್ನು ಮೈಗೂಡಿಸಿಕೊಂಡವರು ಭಾರತದಲ್ಲಿ ಹಲವರುಂಟು. ಹೀಗೆ ಹೇಳುವುದು ಕೂಡ ನಿರಾಧಾರ ಹೇಳಿಕೆಯಾಗುತ್ತದೆ. ಅಂದರೆ, ಚಾಮ್‌ಸ್ಕಿಯ ಇಡೀ ಆಲೋಚನಾ ಕ್ರಮವನ್ನು ಭಾಷಿಕ ಮತ್ತು ರಾಜಕೀಯ ಎಂದು ಬೇರ್ಪಡಿಸಿ ನೋಡುವುದು ತಕ್ಕುದಾದ ಬಗೆಯಲ್ಲ. ಗ್ರಹಿಕೆ ಮತ್ತು ಪ್ರಜ್ಞೆಯ ಪಾತಳಿಗಳಲ್ಲಿ ಅಡಕಗೊಳಿಸುವ ಅರಿವಿನ ವಿನ್ಯಾಸಗಳು ಚಾಮ್‌ಸ್ಕಿಯಲ್ಲಿ ಪ್ರಮುಖವಾಗಿ ಭಾಷಿಕ ಚಿಂತನೆಗಳ ಮೂಲಕ ಮೈದಾಳುತ್ತವೆ. ಅಂದರೆ ಚಿಂತನಾ ಕ್ರಿಯೆಗೂ ಹಾಗೂ ಪ್ರಜ್ಞಾ ಕ್ರಿಯೆಗೂ ನಡುವೆ ಸಂಬಂಧವಿದೆ. ಮನುಷ್ಯನ ಅಸ್ತಿತ್ವದ ನೆಲೆಗಳು ಪ್ರಕಟಗೊಳ್ಳುವುದೇ ಈ ಪ್ರಕ್ರಿಯೆಯಲ್ಲಿ. ಈ ವಿನ್ಯಾಸವನ್ನು ಚಾಮ್‌ಸ್ಕಿ ತನ್ನ ಭಾಷಿಕ ಚರ್ಚೆಗಳ ಸನ್ನಿವೇಶದಲ್ಲಿ ಎಲ್ಲಿಯೂ ನೇರವಾಗಿ ವ್ಯಕ್ತಪಡಿಸುವುದಿಲ್ಲ.

ತತ್ವಗಳಲ್ಲಿ ಅಂತರ್ನಿಹಿತವಾಗಿರುವ ಸುಪ್ತ ಪ್ರಜ್ಞೆಯು ಎಲ್ಲ ಭಾಷೆಗಳನ್ನು ನಿಭಾಯಿಸುತ್ತದೆ. ಈ ತಾತ್ವಿಕತೆಯು ಪ್ರಾಯೋಗಿಕವಾದಿಗಳ (ಎಂಪಿರಿಸಿಸ್ಟ್) ತಾತ್ವಿಕ ವಿನ್ಯಾಸಕ್ಕೆ ಪ್ರತಿಯಾಗಿ ರೂಪುಗೊಂಡಿದ್ದಲ್ಲದೇ, ಇದು ಕಾರ್ಟ್ಸಿಯನ್ ವೈಚಾರಿಕತೆಯನ್ನೂ ಪ್ರಮಾಣೀಕರಿಸುತ್ತದೆ. ಚಾಮ್‌ಸ್ಕಿ ಪ್ರಕಾರ ಮಕ್ಕಳು ಸ್ವಭಾವತಃ ಹಾಗೂ ಸೃಜನಶೀಲವಾಗಿ ಸಾಂಸ್ಕೃತಿಕ ಅನಾರ್ಕಿಸ್ಟುಗಳನ್ನು ಹೋಲುತ್ತಾರೆಯೇ ಹೊರತು, ಅವರು ಸಾಂಸ್ಕೃತಿಕ ಕನ್ಫರ್ಮಿಸ್ಟ್‌ಗಳು ಆಗಿರುವುದಿಲ್ಲ. ಅಂತರ್ನಿಹಿತವಾದ ಭಾಷಿಕ ಕಸುವಿನ ಪರಿಣಾಮವಾಗಿ ಮಕ್ಕಳು ಭಾಷಿಕ ನಿಯಮಗಳನ್ನು ಪ್ರತ್ಯೇಕವಾಗಿ ಕಲಿಯಬೇಕಾಗಿಲ್ಲ. ಆಳದಲ್ಲಿ ಅವರು ಅವುಗಳನ್ನು ಅರಿತುಕೊಂಡಿರುತ್ತಾರೆ. ಚಾಮ್‌ಸ್ಕಿ ತನ್ನ ಈ ಚಿಂತನೆಗಳನ್ನು ನೈಸರ್ಗಿಕ ವಿಜ್ಞಾನದ ಕೊಡುಗೆಗಳನ್ನಾಗಿ ಗ್ರಹಿಸುತ್ತಾನೆ. ಏಕೆಂದರೆ ಇವುಗಳು ರಾಜಕೀಯವಾಗಿ ತಟಸ್ಥವಾಗಿರುತ್ತವೆ. ಆದಾಗ್ಯೂ, ಈತನಿಗಿರುವ ಭರವಸೆಯೇನೆಂದರೆ, ವೈಜ್ಞಾನಿಕ ದೃಷ್ಟಿಕೋನಗಳಿಂದ ಪ್ರೇರಿತವಾಗಿರುವ ಈ ಭಾಷಾಶಾಸ್ತ್ರೀಯ ಚಿಂತನೆಗಳು ಪರೋಕ್ಷವಾಗಿ ರಾಜಕೀಯ ಪರಿಣಾಮಗಳನ್ನು ಉಂಟುಮಾಡುತ್ತವೆ ಎಂಬುದಾಗಿದೆ. ಉದಾಹರಣೆಗೆ, ದಬ್ಬಾಳಿಕೆಯ ಸಿದ್ಧಾಂತಗಳಲ್ಲಿ ಅಡಕವಾಗಿರುವ ನಿಲುವುಗಳನ್ನು ಬಹಿರಂಗಪಡಿಸುವ ಮೂಲಕ ಅಂತಹ ದಬ್ಬಾಳಿಕೆಗಳಿಗೆ ಪ್ರತಿರೋಧವನ್ನು ಒಡ್ಡುವ ಪ್ರೇರೇಪಣೆಯನ್ನು ನೀಡುತ್ತವೆ. ಚಾಮ್‌ಸ್ಕಿ ತನ್ನ ಇಡೀ ಆ್ಯಕ್ಟಿವಿಸಂನ ಮೂಲಕ ಮನುಕುಲದ ಭವಿಷ್ಯವನ್ನು ಕಂಡರಿಸುತ್ತಾನೆ. ಅಂದರೆ 'ವೈಜ್ಞಾನಿಕ ನಾಗರಿಕತೆ'ಯನ್ನು ಸಾಕಾರಗೊಳಿಸುವುದಕ್ಕೆ ಇಂತಹ ಪ್ರತಿರೋಧಾತ್ಮಕ ಆಂದೋಲನಗಳು ಒತ್ತಾಸೆಯಾಗುತ್ತವೆ ಎಂಬ ವಾಸ್ತವವನ್ನು ಚಾಮ್‌ಸ್ಕಿ ಬಲವಾಗಿಯೇ ನಂಬಿದ್ದಾನೆ.

ಮಾನವಕುಲದ ಪರ್ವದಿಂದ ಮಾನವ ಪ್ರಜ್ಞಾ ವ್ಯವಸ್ಥೆಯವರೆಗೂ ಹಾಗೂ ಈ ಹೊತ್ತಿನ ಬದುಕಿನವರೆಗಿನ ವಿಕಾಸಗಳು ಕೇವಲ ಮನುಷ್ಯರು ಹೀಗೆ ಆನುವಂಶಿಕವಾಗಿ ಹಾಗೂ ಜೈವಿಕವಾಗಿ ಮಾತನಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎನ್ನುವುದನ್ನು ಮಾತ್ರ ನಿರೂಪಿಸದೇ, ಸಮೂಹಗಳ ಬದುಕಿನ ಭಾಷಿಕ ಮತ್ತು ಸಾಮಾಜಿಕ ಸೃಜನಶೀಲ ನಿಲುವುಗಳಲ್ಲಿ ಏರ್ಪಡುವ ಸಾಂಸ್ಥಿಕ ಬಿಕ್ಕಟ್ಟುಗಳನ್ನು ಬಗೆಹರಿಸುವ ದಾರಿಗಳನ್ನಾಗಿಯೂ ಈ ಚಿಂತನೆಗಳನ್ನು ರೂಪಿಸಲಾಗಿದೆ. ಚಾಮ್‌ಸ್ಕಿಯ ಹೋರಾಟದ ಸನ್ನಿವೇಶಗಳ ವ್ಯಾಪ್ತಿಯಲ್ಲಿ ನಿಂತು ನೋಡಿದಾಗಲೂ, ಮನುಷ್ಯನೊಳಗೆಯೇ ಸ್ವಯಂಪ್ರೇರಿತವಾಗಿ ಏರ್ಪಡುವ ಈ ಭಾಷಿಕ ಸಂಘಟನೆಯನ್ನು ಸಾಮಾಜಿಕ ವಿಮೋಚನೆಯ ನಿಲುವುಗಳೊಂದಿಗೆ ತಳಕುಹಾಕಿ ಚರ್ಚಿಸುವುದಕ್ಕೂ ಈತನ ಭಾಷಿಕ ಚಿಂತನೆಗಳಲ್ಲಿ ಅವಕಾಶವಿದೆ. ಆದರೆ ಚಾಮ್‌ಸ್ಕಿ ತನ್ನ ಈ ವೈಜ್ಞಾನಿಕ ಗ್ರಹಿಕೆಗಳಲ್ಲಿ ಈ ಬಗೆಯ ಚಿಂತನೆಗಳನ್ನು ತಾತ್ವಿಕವಾಗಿ ಹೊರಗಿಡುತ್ತಾನೆ. ಹಾಗಾಗಿ ಚಾಮ್‌ಸ್ಕಿಯ ಭಾಷಿಕ ಚಿಂತನೆಗಳನ್ನು ಕ್ರಾಂತಿಕಾರಿ ಎಂದು ಗುರುತಿಸಿದಾಗಲೂ ಕೂಡ ರಾಜಕೀಯ ಇಲ್ಲವೇ ಸಾಮಾಜಿಕ ಅರ್ಥದಲ್ಲಿ ಅಲ್ಲವೆಂಬುದು ವಿಶೇಷ.

ಮನುಷ್ಯನ ಮೆದುಳಿನಲ್ಲಿ ಅಂತಸ್ಥವಾಗಿರುವ ಭಾಷೆಯನ್ನು ನೈಸರ್ಗಿಕ ವಿದ್ಯಮಾನದೊಂದಿಗೆ ಚಾಮ್‌ಸ್ಕಿ ಹೋಲಿಸುತ್ತಾನೆ. ಅಂದರೆ, ಬದುಕಿನ